# G.P.PORWAL ARTS COMMERCE & V.V. SALIMATH SCIENCE COLLEGE SINDAGI -586128

(Dist, vijayapur) Affitiated to Rani Channamma University Belagav (Karnataka State)

Accredited at B(2,42 CGPA) by NAAC

e-mailgpprincipal@gmail.com web,www.gppvvs.ac in ph,21244/9916854497

## SEMINAR/PRESENTATION/PROJECT
## 2022-23
## DEPARTMENT OF HISTORY
## PROJECT WORK ON

Name of the Deparment:- History-DSC-6

Name of the Student:- channamma m yatnal

Mobile No :- 7795395847

Class :- B.A. III nd SeM

Registration No :- U15NB21A0035

Titel of the Project Centers of Jai Dharma

Date :- ____________

Total Marks :- 10/10

C.M. Yatnal
STUDENT SIGN

Head
Dept. of History
G.P.P.Arts, Commerce & V.V.S Science College, SINDAGI-586128.

GUIDED BY
DR .SUMA.S.NIRNI
DEPT OF HISTORY

Coordinator IQAC
G. P. PORWAL ARTS, COM &

Principal,
G. P. Porwal Arts, Comm &

# ಪರಿವಿಡಿ

⇒ ಜೈನ ಧರ್ಮ ಮತ್ತು ಬಾಂಬೆ ಕರ್ನಾಟಕದ ಜೈನ ಕೇಂದ್ರಗಳು

⇒ ಮಹಾವೀರ ಜೀವನ


⇒ ಪೀಠಿಕೆ

⇒ ಕೆಲವು ಪ್ರಮುಖ ಜೈನ ಕೇಂದ್ರಗಳು

* ಬಾದಾಮಿ
* ಪಟ್ಟದಕಲ್ಲು
* ಐಹೊಳೆ
* ಹಳ್ಳೂರ
* ತೇರದಾಳ
* ಲಕ್ಕುಂಡಿ
* ಬೆಳಗಾವಿ
* ಹಲಸಿ
* [illegible]
* ಉಪಸಂಹಾರ
* ಉಲ್ಲೇಖಗಳು

**ಪೀಠಿಕೆ :-** ಈ ಬಾಂಬೆ ಕರ್ನಾಟಕದ ಪ್ರಮುಖ ಜೈನ ಕೇಂದ್ರಗಳಾದ ಬಾದಾಮಿ. ಪಟ್ಟದಕಲ್. ತೇರದಾಳ. ಹಳ್ಳೂರ. ಲಕ್ಕುಂಡಿ ಮುಂತಾದ

## ಮಹಾವೀರ :-



ವರ್ಧಮಾನ ಎಂದು ಕರೆಯಲ್ಪಡುವ ಮಹಾವೀರ ಜೈನ ಧರ್ಮದ 24 ನೇ ತೀರ್ಥಂಕರನಾಗಿದ್ದಾನೆ. ಇವರು 23ನೇ ತೀರ್ಥಂಕರ ಪಾರ್ಶ್ವನಾಥನ ಆಧ್ಯಾತ್ಮಿಕ ಉತ್ತರಾಧಿಕಾರಿಯಾಗಿದ್ದರು.

ಮಹಾವೀರರು 6ನೇ ಶತಮಾನದ ಪ್ರಾಚೀನ ಭಾರತದಲ್ಲಿ ರಾಜ ಕ್ಷತ್ರಿಯ ಜೈನ ಕುಟುಂಬದಲ್ಲಿ ಜನಿಸಿದರು.

## ಜೀವನ :-

ತಂದೆ :- ಸಿದ್ಧಾರ್ಥ

ತಾಯಿ :- ತ್ರಿಶಲಾ

ಜನನ :- 6ನೇ ಶತಮಾನ / ವೈಶಾಲಿ ಜಿಲ್ಲೆಯ ಕುಂಡಗ್ರಾಮ ಎಂಬ ಪ್ರದೇಶದಲ್ಲಿ ಜನಿಸಿದರು. ಮಹಾವೀರರು ತಮ್ಮ 30 ನೇ ವಯಸ್ಸಿನಲ್ಲಿ ಎಲ್ಲಾ ಆಸ್ತಿಯನ್ನು ತ್ಯಜಿಸಿದರು ಮತ್ತು ಆಧ್ಯಾತ್ಮಿಕ ಜಾಗೃತಿಯ ಅನ್ವೇಷಣೆಗಾಗಿ ವರ್ಷಗಳ ಕಾಲ ತೀವ್ರವಾದ ಧ್ಯಾನ ಮತ್ತು ಕಠಿಣ ತಪಸ್ಸನ್ನು ಅಭ್ಯಾಸ ಮಾಡಿದರು. ಮಹಾವೀರನಿಗೆ ಎರಾಜಾ ಎಂಬ ಅಕ್ಕ ಮತ್ತು ನಂದಾ ಎಂಬ ಹಿರಿಯ ಸಹೋದರ ಇದ್ದರು.

ಈ ರೀತಿ 12 ವರ್ಷಗಳ ನಿರಂತರ ಕಠಿಣ ಪರಿಶ್ರಮವು ಮಹಾವೀರನನ್ನು ಜಿನನನ್ನಾಗಿಸಿತು. ಅಂದರೆ 42ನೇ ವರ್ಷದಲ್ಲಿ ಈತನು ಇಂದ್ರಿಯ ಜಯಿಸಿ ಕೇವಲ ಜ್ಞಾನವನ್ನು ಸಂಪಾದಿಸಿ ಕೇವಲಿ (ಮಹಾಜ್ಞಾನಿ) ಆದನು. ಸು. ೩೦ ವರ್ಷಗಳ ಸಂಸಾರದಿಂದ ಹೊರಬಂದು ವೈರಾಗ್ಯ ಸ್ವೀಕರಿಸಿದ. ಮಹಾವೀರನು ಸಾವಿರಾರು ಅನುಯಾಯಿಗಳನ್ನು ಆಕರ್ಷಿಸಿದನು. ಜಿನನಾದ ಮಹಾವೀರನ ಅನುಯಾಯಿಗಳನ್ನು ಜೈನರೆಂದು ಕರೆಯಲಾಯಿತು. ನಂತರ ಜೈನ ಧರ್ಮವು ರಾಷ್ಟ್ರದಲ್ಲಿ ಬಹುಬೇಗ ದಕ್ಷಿಣಕ್ಕೂ ವ್ಯಾಪಿಸಿತು. ದಕ್ಷಿಣದ ಅನೇಕ ಅರಸು ಮನೆತನಗಳು, ಪ್ರಮುಖವಾಗಿ ಚಾಲುಕ್ಯ ಕದಂಬ, ಗಂಗ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದ ಅರಸು ಮನೆತನಗಳು, ಜೈನ ಧರ್ಮವನ್ನು ಪ್ರೋತ್ಸಾಹಿಸಿದವು.


ಅನೇಕ ಜೈನ ಬಸದಿಗಳು ನಿರ್ಮಾಣಗೊಂಡ ಎಲ್ಲೆಡೆ ಅನೇಕ ದಾನ-ದತ್ತಿಗಳನ್ನು ಪಡೆದುಕೊಂಡವು. ಅಸಂಖ್ಯಾತ ಜೈನ ಯತಿಗಳು, ಪಂಡಿತರು ಉದಯಿಸಿ ಧರ್ಮ-ತತ್ವ-ಸಾಹಿತ್ಯ ಕ್ಷೇತ್ರವನ್ನು ಉಜ್ವಲಗೊಳಿಸಿದರು.

## ಬಾದಾಮಿ :-

ಚಾಲುಕ್ಯರ ರಾಜಧಾನಿ ಬಾದಾಮಿಯು ಪ್ರಮುಖ ಜೈನ ಕೇಂದ್ರವಾಗಿತ್ತು. ಈ ಅವಧಿಯಲ್ಲಿ ದಕ್ಷಿಣದಲ್ಲಿ ಜೈನ ಧರ್ಮವು ರಾಜಾಶ್ರಯಕ್ಕೆ ಒಳಗಾಗಿತ್ತು. ರವಿಕೀರ್ತಿಯು ಇಮ್ಮಡಿ ಪುಲಕೇಶಿಯ ಆಸ್ಥಾನದ ಜೈನ ವಿದ್ವಾಂಸನು ಮತ್ತು ಕವಿಯಾಗಿದ್ದು ಐಹೊಳೆ ಶಾಸನವನ್ನು ಬರೆದನು. ಅವನು ಪುಲಕೇಶಿಯ ಆಸ್ಥಾನದಲ್ಲಿ ಉನ್ನತ ಸ್ಥಾನಕ್ಕೆ ಪಾತ್ರನಾಗಿದ್ದನು. ವಿಜಯಾದಿತ್ಯ & ವಿನಯಾದಿತ್ಯರು ಜೈನ ಪಂಡಿತರಿಗೆ ಅನೇಕ ಗ್ರಾಮಗಳನ್ನು ದತ್ತಿಯಾಗಿ ನೀಡಿದರು. ವಿಜಯಾದಿತ್ಯನ ಅಕ್ಕಳಾದ - ಕುಂಕುಮ ಮಹಾದೇವಿಯು ಪುಲಿಗೆರೆಯ-ಲ್ಲಿ ಆನೆ ಸೆಜ್ಜೆ ಬಸದಿಯನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಅನೇಕ ಗ್ರಾಮಗಳನ್ನು ದಾನವಾಗಿ ನೀಡಿದ್ದಳು.


ಬಾದಾಮಿಯು ಜೈನ ಕೇಂದ್ರವೆನಿಸಲು ಇಲ್ಲಿಯ ನಾಲ್ಕನೇ ಗುಹೆಯು ಜೈನ ಗುಹೆ ದೇವಾಲಯವಾಗಿದ್ದು, ಇದು ಬಹು ಕಲಾತ್ಮಕವಾದ ಚಿಕ್ಕದಾದ ಗುಹಾಲಯವಾಗಿದೆ. ಜೈನ ತೀರ್ಥಂಕರರ ಬಿಂಬ, ಶಿಲ್ಪ ಹೊಂದಿರುವ ಈ ಗುಹೆಯು 7-ನೇ ಶತಮಾನದಲ್ಲಿ ನಿರ್ಮಾಣಗೊಂಡಿತೆಂದು ಅಭಿಪ್ರಾಯ ಪಡಲಾಗಿದೆ. 11-12ನೇ ಶತಮಾನದ ಹೊತ್ತಿಗೆ ಹಲವು ಶಿಲ್ಪಗಳ ಕೆತ್ತನೆಗಳನ್ನು ಇದರಲ್ಲಿ ಸೇರಿಸಲಾಯಿತು.

## ಪಾರ್ಶ್ವನಾಥ :



ಗುಹೆಗಳಲ್ಲಿ ಜೈನ ತೀರ್ಥಂಕರರ
ಚಿತ್ರಗಳ ಜೊತೆಗೆ ಪ್ರಮುಖವಾಗಿ
ಬಾಹುಬಲಿ, ಪಾರ್ಶ್ವನಾಥ, ಮಹಾವೀರರ
ಶಿಲ್ಪಗಳನ್ನು ಕೆತ್ತಲಾಗಿದೆ. ಬಾಹುಬಲಿಯು
ಕಾಯೋತ್ಸರ್ಗದಲ್ಲಿ ಧ್ಯಾನಸ್ಥ ಭಂಗಿಯಲ್ಲಿ
ನಿಂತಿದ್ದು ಕಾಲುಗಳಿಗೆ ಬಳ್ಳಿಗಳು ಸುತ್ತಿಕೊಂಡಿವೆ. ಅದರಂತೆ
ಪಾರ್ಶ್ವನಾಥನು ತಮ್ಮ ತಲೆಯ ಸರ್ಪದ ಪ್ರಭಾವಳಿಯಲ್ಲಿ ಚಿತ್ರಿಸ
ಲಾಗಿದೆ. ಮಹಾವೀರನು ಸಿಂಹದ ಸಿಂಹಾಸನದಲ್ಲಿ ಆಸೀನನಾಗಿದ್ದು
ಕೆಲವರು ಇದು ಜಿನ ಎಂದು ಅಭಿಪ್ರಾಯಪಡುತ್ತಾರೆ. ಚಾವಣಿಗಳು
ನಾಟ್ಯಮಂಡಪ, ಸುಂದರ ಕೆತ್ತನೆಯ ಬಣ್ಣ ಚಿತ್ರಗಳು ಇದ್ದವು
ಮಸುಕಾಗಿವೆ.

ಗರ್ಭಗೃಹದಲ್ಲಿ ಮಹಾವೀರರ ಪೀಠದಲ್ಲಿ ಆಕೃತಿಯ




ಮಹಾವೀರನ ಕುರಿತು ಬರೆಸಿದ ಕನ್ನಡ
ಶಾಸನವಿದೆ. ಒಳಗಿನ ಕಂಬ - ಗೋಡೆಗಳ
ಮೇಲೆ 24 ತೀರ್ಥಂಕರರು, ಯಕ್ಷ, ಯಕ್ಷಿ
ಪದ್ಮಾವತಿ ಶಿಲ್ಪಗಳನ್ನು ಬಿಡಿಸಲಾಗಿದೆ.
ಇವುಗಳಿಂದ ಸ್ಪಷ್ಟವಾಗುವ ವಿಷಯವೆಂದರೆ
ಬಾದಾಮಿಯು ಚಾಲುಕ್ಯರ ಕಾಲದ ಪ್ರಮುಖ

## ಪಟ್ಟದಕಲ್ಲು :

ಬಾದಾಮಿ ಚಾಲುಕ್ಯರ ಇನ್ನೊಂದು ಪ್ರಮುಖ ಕೇಂದ್ರವಾದ ಪಟ್ಟದಕಲ್ಲು ಕೂಡ ಜೈನ ಕೇಂದ್ರವಾಗಿತ್ತು. ಈಗಾಗಲೇ ನಾವು ಈ ಕುರಿತು ಹಲವು ಅಂಶಗಳನ್ನು ಅರಿತಿದ್ದೇವೆ. ಚಾಲುಕ್ಯರ ಹಲವು ಕೇಂದ್ರಗಳು ಜೈನ ಆರಾಧನಾ ಸ್ಥಳಗಳಾಗಿದ್ದುವೆಂಬುದು ಸತ್ಯ. ಇಲ್ಲಿಯ ಜೈನ ದೇವಾಲಯವು ಒಂಬತ್ತನೇ ಶತಮಾನದಲ್ಲಿ ಅಂದರೆ ರಾಷ್ಟ್ರಕೂಟ ಅರಸನ ಕೃಷ್ಣ, ಇಲ್ಲವೇ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡಿರಬೇಕು.


## ಜೈನ ನಾರಾಯಣ ಮಂದಿರ



ಇದು ಚಿತ್ರ ಒಳ ಭಿನ್ನವಾಗಿದ್ದು ಚತುರ್ಗಳಲ್ಲಿ ಮಾತ್ರ ಜಿನ ಶಿಲ್ಪಗಳನ್ನು ಕೆತ್ತಲಾಗಿದೆ. ಉಳಿದ ದೇಗುಲಗಳಂತೆ ಇದು ಚಾಕಾರದ ಗರ್ಭಗುಡಿ ಪ್ರದಕ್ಷಿಣಪಥ. ಮುಂಭಾಗ ಮುಖಮಂಟಪ ಹೊಂದಿದ್ದು ಕಂಬದ ಗೋಡೆಗಳಲ್ಲಿ ಕೆತ್ತಿರುವ ಜೈನ ಶಿಲ್ಪಗಳಿವೆ. ಕಟ್ಟಡದ ಭಾಗದಲ್ಲಿ ಉತ್ತರ ಶೈಲಿಯ ಶಿಖರಗಳನ್ನು ಕಾಣಬಹುದು. ಪಾಂತ್ರಕವಾಗಿ ಹೊರಗಿನ ಮುಖ್ಯಗಳ್ಳನ ಕಂಬಗಳು ನೋಡು, ನರ್ತಕನ ಶಿಲ್ಪಗಳು, ತೀರ್ಥಂಕರರ ಶಿಲ್ಪ ಇಲ್ಲಿಯ ವಿಶೇಷ ವಿಶಿಷ್ಟತೆಯಾಗಿದ್ದು ಜೈನ ಧರ್ಮದ ಪ್ರತಿಷ್ಠಿತ ಕುರುಹುಗಳನ್ನು ಕಾಣಬಹುದು.

## ಪೀಠಿಕೆ :

ಐಹೊಳೆಯು ಚಾಲುಕ್ಯರ ಮತ್ತೊಂದು ಸಾಂಸ್ಕೃತಿಕ ಕೇಂದ್ರವಾಗಿದ್ದು, ಇಲ್ಲಿ ಸುಮಾರು ಹತ್ತು ಜೈನ ಸ್ಮಾರಕಗಳನ್ನು ಕಾಣಬಹುದು. ಇವೆಲ್ಲವುಗಳು ವಿಶಿಷ್ಟವಾಗಿ ಜೈನ ಬಸದಿ, ಮೇಗುತಿ ಬೆಟ್ಟ. ಚರಂತಿ ಯೋಗಿನಾರಾಯಣ ಸಂಕೀರ್ಣದಲ್ಲಿ ಇವುಗಳನ್ನು ಗುರುತಿಸಬಹುದಾಗಿದೆ. (6-12ನೇ) ಶತಮಾನ.




### ಮೇಗುಡಿ ಬೆಟ್ಟದ ಜೈನ ದೇಗುಲ

ಐಹೊಳೆಯ ಮೇಗುತಿ ಬೆಟ್ಟದ ಜಿನಾಲಯವು ಕೋಟೆಯಿಂದ ಸುತ್ತುವರಿದ ಮಧ್ಯವಾಗಿದ್ದು ಮಹಾವೀರ ತೀರ್ಥಂಕರನ ಜಿನಾಲಯವಾಗಿದೆ. ಮೇಗುಡಿ ಎರಡು ಮಹಡಿ ದೇವಾಲಯ ಎರಡನೇ. ಇದು ಚೌಕ ಮುಖಮಂಟಪ ಮತ್ತು ಪ್ರದಕ್ಷಿಣ ಪಥದ ಗರ್ಭಗೃಹ ಹೊಂದಿದೆ. ಇತರ ಜೈನ ದೇವಾಲಯಗಳಂತೆ ಜಿನಾಲಯವೂ ಕೂಡ ಎತ್ತರದ ಜಗತಿಯ ಮೇಲೆ ನಿರ್ಮಾಣಗೊಂಡಿದೆ. ಕಂಬಗಳಿಂದ ಕೂಡಿದ ಚೌಕಾಕಾರದ ಸಭಾಮಂಟಪ ಮತ್ತು ಗೋಡೆಗಳನ್ನು ಹೊಂದಿದೆ. ಇಲ್ಲಿ ತೀರ್ಥಂಕರರ, ಯಕ್ಷಿ ಮತ್ತು ಇತರ ಜೈನ ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಒಂದೇ ದೇವಾಲಯ ಮಾತ್ರ ಉತ್ತಮ ಸ್ಥಿತಿಯಲ್ಲಿದೆಯೆಂಬುದನ್ನು ಇಲ್ಲಿಯ ಉತ್ತಮ ಶಿಲ್ಪಗಳನ್ನು ನೋಡಿದರೆ ಅನುಭವಕ್ಕೆ ಬರುತ್ತದೆ.

ಮೇಗುತಿ ದೇವಾಲಯವು ಶಾಸನದಿಂದಾಗಿಯೂ ಮಹತ್ವ ಪಡೆದುಕೊಂಡಿದ್ದು ಇಮ್ಮಡಿ ಪುಲಕೇಶಿಯ ಆಸ್ಥಾನದ ಕವಿ ರವಿಕೀರ್ತಿ ಬರೆದಿರುವ ಐಹೊಳೆ ಪ್ರಶಸ್ತಿ ಶಾಸನವು (ಕ್ರಿ.ಶ. 634) ಇದೇ ದೇವಾಲಯದಲ್ಲಿದೆ.

ಐಹೊಳೆಯ ಜೈನ ಗುಹಾಲಯವು ಇದೂ ಮೇಗುತಿ ಬೆಟ್ಟದಲ್ಲಿದ್ದು ಕ್ರಿ.ಶ. 6-7ನೇ ಶತಮಾನದ ನಿರ್ಮಾಣವಾಗಿದೆ

## ಐಹೊಳೆ ಜೈನ ಗುಹಾಲಯ



ಐಹೊಳೆ ಗ್ರಾಮ ಹೊರವಲಯ ಸಮೀಪ-ದ ಮೇಗುತಿ ಬೆಟ್ಟದ ಜಿನಾಲಯವನ್ನು ಗುರುತಿಸಲಾಗಿದ್ದು ಮಹಾವೀರ ಸ್ವಾಮಿಗಳ ಪ್ರತಿಮೆಯ ಪಾರ್ಶ್ವನಾಥನ ನಾಲ್ಕು ಜಿನಾಲಯಗಳನ್ನು ಒಳಗೊಂಡಿದೆ. ಇದರಲ್ಲಿ ಎರಡು ಉತ್ತರ ಮತ್ತು ಇನ್ನೆರಡು ಪೂರ್ವ-ಪಶ್ಚಿಮಕ್ಕೆ ಮುಖಮಾಡಿವೆ. ಶಿಲ್ಪವು ದ್ರಾವಿಡ ಶೈಲಿಯಲ್ಲಿ ನಿರ್ಮಿತಗೊಂಡಿದೆ.

ಐಹೊಳೆಯಲ್ಲಿಯೇ ಇರುವ ಚರಂತಿಮಠ ನಿರ್ಮಾಣದ ಜಿನಾಲಯವನ್ನು ಉಲ್ಲೇಖಿಸುವುದಾದರೆ 12ನೇ ಶತಮಾನ-ದ ನಂತರದ ಚಾಲುಕ್ಯ ಶೈಲಿಯ ಜಿನಾಲಯ ಮತ್ತೊಂದು ಪ್ರಸಿದ್ಧವಾಗಿದ್ದು ಮುಖ್ಯ ದೇಗುಲವು ಚರಂತಿಮಠದ ಉತ್ತರಾಭಿಮುಖವಾಗಿದೆ. ಮುಖಮಂಟಪ, ಅಂತರಾಳ, ಗರ್ಭಗೃಹ ಹೊಂದಿದೆ.

## ಹಳ್ಳೂರು :-

ಬಾಗಲಕೋಟೆ ಜಿಲ್ಲೆಯ ಚಿಕ್ಕ ಗ್ರಾಮ ಹಳ್ಳೂರು ಎಂಬ ಬೆಟ್ಟದ ಮೇಲೆ ಜಿನಾಲಯ ನಿರ್ಮಿಸಲಾಗಿದ್ದು ಬೆಟ್ಟದ ಮೇಲೆ ಇರುವ ಕಾರಣ ಇದನ್ನು ಮೇಲ್ಗುಡಿ ಜಿನಾಲಯವೆಂದು ಕರೆಯಲಾಗಿದೆ.

## ಮೇಲ್ಗುಡಿ ಜಿನಾಲಯ :



ಹಳ್ಳೂರ ಗ್ರಾಮದಲ್ಲಿ ಎರಡು ಐತಿಹಾಸಿಕ ದೇವಾಲಯಗಳನ್ನು ಕಾಣಬಹುದು. - ಎಂಟನೇ ಶತಮಾನದಲ್ಲಿ ನಿರ್ಮಿತ ಬಸದಿಗಳು & ಒಂಬತ್ತನೇ ಶತಮಾನ ಬಸದಿಗಳು, ಬೆಟ್ಟದ ಮೇಲಿರುವ ಮೇಲ್ಗುಡಿ ಜಿನಾಲಯ. ಜಿನಾಲಯವು ಐಹೊಳೆಯ ಮೇಗುಡಿ ಜಿನಾಲಯದಂತೆಯೇ ಇದ್ದು. ಇದನ್ನು ಕ್ರಿ.ಶ. ಸುಮಾರು 870 ರಲ್ಲಿ ರಾಷ್ಟ್ರಕೂಟ ದೊರೆ ಅಮೋಘವರ್ಷನು ನಿರ್ಮಿಸಿದನು. ಸುಂದರವಾದ ಮರಳುಗಲ್ಲಿನ ಈ ದೇಗುಲವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ ಸಂಯೋಜನೆ ಕಲ್ಪನೆ ಕಲ್ಲಿನ ಮೇಲೆ ತುಂಬ ಸುಂದರವಾಗಿ ನಿರ್ಮಿಸಿದೆ. ಇಲ್ಲಿಯ ಗರ್ಭಗೃಹದಲ್ಲಿ ಮೊದಲು ಜೈನ ತೀರ್ಥಂಕರರ ಮೂರ್ತಿ ಇತ್ತೆಂದು ನಂಬಲಾಗಿದ್ದು ನಂತರ ಇದು ಶಿವಾಲಯವಾಗಿ ಮಾರ್ಪಟ್ಟಿತೆಂದು ತಿಳಿಯುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ ಮಂಟಪದ ಜೈನ ತೀರ್ಥಂಕರರ ಶಿಲ್ಪ, ಇದಕ್ಕೆ ಸ್ಪಷ್ಟವಾದ ದಾಖಲೆಗಳು ಲಭ್ಯವಿಲ್ಲ.

**ತೇರದಾಳ :**

ಬಾಗಲಕೋಟೆ ಜಿಲ್ಲೆಯ ಜೈನ ಕೇಂದ್ರವೆನಿಸಿದ ತೇರದಾಳ ಪಟ್ಟಣವು ಕ್ರಿ.ಶ. 1187 ರಲ್ಲಿ ನಿರ್ಮಿಸಲ್ಪಟ್ಟ ನೇಮಿನಾಥ ತೀರ್ಥಂಕರರ ಬಸದಿಯ ಮೂಲಕ ಪ್ರಮುಖ ಜೈನ ಕೇಂದ್ರವೆನಿಸಿದೆ.

**ಲಕ್ಕುಂಡಿ :-** ಗದಗ ಜಿಲ್ಲೆಯ ಲಕ್ಕುಂಡಿ ಗ್ರಾಮವು ಪ್ರಾಚೀನ ಪ್ರಸಿದ್ಧ



ಜೈನ ಕೇಂದ್ರವಾಗಿತ್ತು. ಇಲ್ಲಿಯ ಮಹಾವೀರ ಜಿನಾಲಯವನ್ನು ಬ್ರಹ್ಮ ಜಿನಾಲಯವೆಂದು ಕರೆಯುತ್ತಿದ್ದು ಕ್ರಿ.ಶ. 11ನೇ ಶತಮಾನದ ಸುಮಾರಿಗೆ ನಿರ್ಮಾಣಗೊಂಡಿದೆ. ಇದು ಪ್ರಾಂತೀಯ ನಾಯಕ (ಗವರ್ನರ) ನಾಗದೇವನ ಪತ್ನಿ ದಾನಚಿಂತಾಮಣಿ ಅತ್ತಿಮಬ್ಬೆಯ ನಿರ್ದೇಶನದ ಈ ಜಿನಾಲಯವು ಹಾಳಾಗದೆ ಉಳಿದಿದ್ದು ಮುಖಮಂಟಪ, ಗರ್ಭಗೃಹ, ಜೈನ ಶಿಲ್ಪಗಳು, ಮಹಾನ, ಬ್ರಹ್ಮ-ಸರಸ್ವತಿಯ ಶಿಲ್ಪಗಳು ಇಲ್ಲಿಯ ವಿಶೇಷತೆಗಳಾಗಿವೆ.

ಸುಮಾರು 13ನೇ ಶತಮಾನದ ನಂತರ ಇದು ಭಗ್ನ ಶಿಥಿಲಗೊಂಡಂತೆ ತೋರುತ್ತದೆ. ಇಲ್ಲಿ ಚಾಲುಕ್ಯರ ಕಾಲದ ಹಲವು ಹಿಂದೂ-ಜೈನ ಸ್ಮಾರಕಗಳಲ್ಲಿ ಬ್ರಹ್ಮಜಿನಾಲಯವು ಪ್ರಮುಖವೆನಿಸಿದೆ. ಇಲ್ಲಿಯ ಸ್ಮಾರಕಗಳು ಭಾರತೀಯ ಪರಂಪರೆ ತಾಣವಾಗಿದ್ದು ಪುರಾತತ್ವ ಇಲಾಖೆಯ ಸುಪರ್ದಿಯಲ್ಲಿವೆ.

## ಬೆಳಗಾವಿ :-

ಹಾಗೆ ಕರ್ನಾಟಕದ ಪ್ರಮುಖ ಜಿಲ್ಲೆ ಸುಂದರವಾದ ಬೆಳಗಾವಿಯು ಹಲವು ವಿಶೇಷತೆಯನ್ನು ಹೊಂದಿದೆ. ಬೆಳಗಾವಿ ಕೋಟೆಯಲ್ಲಿನ ಪ್ರಮುಖ ಆಕರ್ಷಣೆಯೆಂದರೆ ಕಮಲ ಬಸದಿ.

## ಕಮಲ ಬಸದಿ:-



ಇದನ್ನು ಸವದತ್ತಿಯ ರಟ್ಟರ ದೊರೆ ನಾಲ್ಕನೇ ಕಾರ್ತವೀರ್ಯನ ಮಂತ್ರಿ ಬಿಚಿರಾಜ ಕ್ರಿ.ಶ. 1204 ರಲ್ಲಿ ನಿರ್ಮಿಸಿದನು. ಈ ಬಸದಿಯು ಮೂಲತಃ ಶಾಂತಿನಾಥ ತೀರ್ಥಂಕರನಾಗಿದ್ದು ಈಗ ಗರ್ಭಗೃಹದಲ್ಲಿ ನೇಮಿನಾಥನ ಮೂರ್ತಿಯನ್ನು ಹೊಂದಿದೆ.

ಜೊತೆ ಬಿಚಿರಾಜನು ತನ್ನ ಬಂಧುಮಿತ್ರರ ಪ್ರೇರಣೆಯಿಂದ ಈ ಬಸದಿಯನ್ನು ಕಟ್ಟಿಸಿ ಭೂದಾನ ಮಾಡಿದ್ದಾನೆ. ಬಸದಿ ನಿರ್ಮಾಣಕ್ಕೆ ಸಹಕಾರ ನೀಡಿದ ರಟ್ಟರ ರಾಜಗುರುವಾದ ಮುನಿಚಂದ್ರನಿಗೆ ಕೂಡ ಭೂಮಿಯನ್ನು ದಾನ ಮಾಡಲಾಗಿದೆ. ಮುನಿಚಂದ್ರನು ಬೆಳಗಾವಿ ಕೋಟೆಯಲ್ಲಿ ಕಟ್ಟಿಸಿದ 108 ಬಸದಿಗಳನ್ನು ನೇಮಿಚಂದ್ರ ಭಟ್ಟಾರಕರು ಸವದತ್ತಿಯ ಈ ಕಮಲ ಬಸದಿಯು ಬಹಳ ಬಸದಿಯ ಭುವನೇಶ್ವರದಲ್ಲಿ ಮಿಶ್ರವಾಗಿದ್ದ ಕೆತ್ತನೆಯಿದೆ. ಇದು ಕಮಲದಂತೆ ರಚನೆಯಿಂದ ಇದು ಕಮಲ ಬಸದಿ ಎಂದು

## ಬನವಾಸಿ:-

ಶಿರಸಿಯಿಂದ ಪಶ್ಚಿಮಕ್ಕೆ 42 ಕಿ.ಮೀ. ದೂರ ತಾಳಗುಪ್ಪದಿಂದ ಹಾಗು ಹಾನಗಲ್‌ನಿಂದ ದಕ್ಷಿಣಕ್ಕೆ 17. ಕಿ.ಮೀ. ಅಂತರದಲ್ಲಿರುವ ಬನವಾಸಿಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವವಾದ ಸ್ಥಾನವನ್ನು ಪಡೆದುಕೊಂಡಿದೆ ಕರ್ನಾಟಕದ ಪ್ರಥಮ ಸಾಮ್ರಾಜ್ಯದ ಮೊದಲ ಕನ್ನಡ ಮನೆತನ ಕದಂಬ ವಂಶವಿಂದು. ಕದಂಬರು ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು ಶಿರಸಿ ಜಿಲ್ಲೆಯ ಬನವಾಸಿಯು ಇವರ ಮೊದಲನೆಯ ರಾಜಧಾನಿಯಾಗಿತ್ತು.



### :- ಬನವಾಸಿಯ ಭೂವರಾಹ :-

ಮುಂದೆ ಬಂದ ರಾಜ ಮನೆತನ-ಗಳ ಆಳ್ವಿಕೆಯಲ್ಲಿ ಬನವಾಸಿಯು ಪ್ರಾಚೀನ ಸಂಸ್ಕೃತ ಭಾಗಗಳಲ್ಲಿ ಒಂದಾಗಿತ್ತು ಇದನ್ನು ಬನವಾಸಿ-12000 ಎಂದು ಕರೆಯಲಾಗುತ್ತಿತ್ತು.

ಈ ಪ್ರಮುಖ ಸಾಮ್ರಾಜ್ಯದ ರಾಜ ಮನೆತನಗಳು, ಅನೇಕ ದೇವಾಲಯಗಳು ಇಂದು ಬನವಾಸಿಯನ್ನು ಪ್ರಮುಖ ಪ್ರವಾಸಿ ತಾಣವನ್ನಾಗಿ ಮಾಡಿವೆ ಎಂದು ಹೇಳಬಹುದು. ಮಧುಕೇಶ್ವರ ದೇವಾಲಯವು ಇಲ್ಲಿಯ ಪ್ರಮುಖ ಆಕರ್ಷಣೆ. ಇಲ್ಲಿಯ ಭೂವರಾಹ ಮಂಟಪದ ನಿರ್ಮಾಣ ಇದ್ದು ಕ್ರಿ.ಶ. 10ನೇ ಶತಮಾನದ ಕಲ್ಲಿನ ಮಂಟಪದಲ್ಲಿ ...

Head
Dept. of History
G.P.P. Arts, Commerce & V.V.S Science
College, SINDAGI-586128

...ಯ ದಿಂದ ಉತ್ತರಕ್ಕೆ ಇರುವ ಹೆಮ್ಮರಗಿಯು ಒಂದು ಧಾರ್ಮಿಕ & ಐತಿಹಾಸಿಕ ಕೇಂದ್ರವಾಗಿದ್ದು ರಮಣೀಯ ವಾತಾವ-ರಣದ ಸ್ಥಳದಲ್ಲಿ ಇದನ್ನು ಹೆಮ್ಮರಗಿ ಎಂದು ಕರೆಯಲಾಗಿದೆ. ಇಲ್ಲಿರುವ ಜೈನ ಬಸದಿಯು ಹೆಮ್ಮರಗಿಯ ಐತಿಹಾಸಿಕ ಪ್ರಾಮುಖ್ಯತೆ-ಯನ್ನು ಪಡೆದುಕೊಂಡಿದೆ. ಈ ಗ್ರಾಮದ ಮಧ್ಯದಲ್ಲಿ ಎತ್ತರದ ಪ್ರದೇಶದಲ್ಲಿ ನಿರ್ಮಿಸಲಾದ ಜೈನರ ಬಸದಿಯಾಗಿದೆ 23ನೇ ತೀರ್ಥಂಕರನಾದ ಪಾರ್ಶ್ವನಾಥನ ಬಸದಿಯು ಇದು ಆಗಿದೆ.

## ಹೆಮ್ಮರಗಿ ಪಾರ್ಶ್ವನಾಥನ ಮಂದಿರ:



ಈ ಬಸದಿಯು ಪಶ್ಚಿಮಕ್ಕೆ ಮುಖ ಮಾಡಿದ್ದು ಕಪ್ಪು ಶಿಲೆಯಿಂದ ನಿರ್ಮಿಸ-ಲಾಗಿದೆ. ಎತ್ತರವಾದ ಜಗತಿಯ ಮೇಲೆ ನಿರ್ಮಾಣವಾಗಿದ್ದು, ನೋಡಲು ತುಂಬಾ ಸುಂದರವಾಗಿದೆ. ಬಸದಿಯ ಹೊರಬದಿ ಗೋಡೆಗಳಲ್ಲಿ ನೃತ್ಯ, ವಾದ್ಯದ ಭಂಗಿಯ ಶಿಲ್ಪಗಳಿವೆ. ನವರಂಗದಲ್ಲಿ ಸುಂದರವಾದ ಕೆತ್ತನೆಯುಳ್ಳ ಹೊಂದಿರುವ ನಾಲ್ಕು ಕಂಬಗಳಿವೆ.

## ಉಪಸಂಹಾರ :-

ಐತಿಹಾಸಿಕವಾಗಿ ನೋಡುವುದಾದರೆ ಈ ಎಲ್ಲ ಜೈನ ಧರ್ಮದ ಮತ್ತು ಬಾಂಧವ್ಯ ಸಾರುವಲ್ಲಿ ಜೈನ ಕೇಂದ್ರಗಳಾಗಿದ್ದು ಎಲ್ಲ ಒಂದೊ-ಂದು ಕೇಂದ್ರಗಳು ಬಗ್ಗೆ ತಿಳಿಯ ಬೇಕು ಮಾಹಿತಿ ಅದು [illegible]